

ಶ್ರವ್ಯಾ ಎಸ್.
3ನೇ ತರಗತಿ, ಸಿಲಿಕಾನ್ ಸಿಟಿ ಅಕಾಡೆಮಿ,
ಬೆಂಗಳೂರು





# ಪುಟ್ಟನ ಪರೀಕ್ಷೆ

■ ಸುಮಲತಾ ಗಡಿಯಪ್ಪನವರ, ಬಿದರಕುಂದಿ
ಕಲೆ: ಸಂತೋಷ್ ಸಸಿಹಿತ್ಲು

ಪರೀಕ್ಷೆ ಎಂದರೆ ಭಯವಾಗುವುದಮ್ಮ
ಓದಿದ್ದೆಲ್ಲ ಮರೆಯುವುದಮ್ಮ
ಪ್ರಶ್ನೆ ಕಾಗದ ಕೈಯಲ್ಲಿ ಹಿಡಿದು
ಗಡಗಡ ನಡುಗುವೇ ನಾನಮ್ಮ

ಗುರುಗಳು ಹೇಳಿದ ಪಾಠವ ಮರೆತು
ಗೆಳೆಯರ ನೋಡುವೆ ಸುಮ್ಮನೆ ಕೂತು
ದೇವರ ನೆನೆಯುತ ಬರೆದಿಹೆನಮ್ಮ
ಅಂಕವ ನೆನೆದು ಸೊರಗಿಹೆನಮ್ಮ

ಹೊಂದಿಸಿ ಬರೆಯಲು ಹೊಂದಿಕೆಯಾಗದು
ವಿರುದ್ಧ ಪದಕ್ಕೆ ಉತ್ತರ ಸಿಗದು
ಜೋಡಿಸಿ ಬರೆಯಲು ಜೋಡಿಯು ಕಾಣದು
ಬಿಟ್ಟ ಸ್ಥಳಕ್ಕೆ ಜಾಗವೆ ಸಾಲದು

ಕೂಡಿಸಿ ಕಳೆಯಲು ಲೆಕ್ಕವು ತಿಳಿಯದು
ಗುಣಿಸಿ ಭಾಗಿಸಲು ತಾಳೆಯು ಆಗದು
ಚಿತ್ರವ ಬಿಡಿಸಲು ಹಾಳೆಯು ಹರಿವುದು
ತಪ್ಪನು ತಿದ್ದಲು ಸಮಯ ಮುಗಿಯುವುದು

ಪರೀಕ್ಷೆ ಮುಗಿದೊಡನೆ ಸಂತಸ ಪಡುವೆ
ಗೆಳೆಯರ ಸಂಗಡ ಆಡುತ ನಲಿಯುವೆ
ಮುಂದಿನ ಪರೀಕ್ಷೆಗೆ ಚೆಂದದಿ ಓದುವೆ
ಉತ್ತಮ ಅಂಕದಿ ತೇರ್ಗಡೆ ಹೊಂದುವೆ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ: editorsu@sudha.co.in**



ವೈಷ್ಣವಿ ಕನಕಪುರ
4ನೇ ತರಗತಿ, ಅಮಾತ್ರ ಅಕಾಡೆಮಿ,
ಬೆಂಗಳೂರು

